ಹೈಕೋರ್ಟಿನಲ್ಲಿ ಕೇಸ್ ಹಾಕಿ ರಿಪೇಂಡಾಗಿ ಬಂದಮೇಲೆ ಪುನಃ ಈಗಿರತಕ್ಕ ಲ್ಯಾಂಡ್ ಟ್ರಿಬ್ಯೂನಲ್ ಮೆಂಬರ್ಸ್ ಯಾವ ನಿರ್ಣಯ ತೆಗೆದುಕೊಳ್ಳುತ್ತಾರೋ ಅದು ಒಂದು ಕಡೆ, ಸೆಕ್ಷನ್ ೬೬ಕ್ಕೆ ಅಮೆಂಡ್ ಮೆಂಟ್ ತಂದು ಈ ರೀತಿ ಅನ್ಯಾಯವಾಗಿದೆ, ಇದನ್ನು ಸರಿಪಡಿಸಬೇಕು ಎನ್ನುತಕ್ಕ ದೃಷ್ಟಿಯಿಂದ ರಿವ್ಯೂ ಮಾಡಬೇಕು ಎಂದು ಈಗಾಗಲೇ ನಾವು ಕ್ರಮ ತೆಗೆದುಕೊಂಡಿದ್ದೇವೆ. ಸಧ್ಯದಲ್ಲೇ ಆ ತಿದ್ದುಪಡಿ ಬರಬಹುದು, ತಿದ್ದುಪಡಿ ಬಂದರೆ ಇದನ್ನು ರಿವ್ಯೂ ಮಾಡಿ ನ್ಯಾಯ ದೊರಕಿಸುವುದಕ್ಕೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಎಂ. ತಮ್ಮಯ್ಯ.—ಮಾನ್ಯ ರೆವಿನ್ಯೂ ಮಂತ್ರಿಗಳು ಕ್ರಮ ತೆಗೆದುಕೊಂಡಿರುವುದನ್ನು ನಾನು ಸ್ವಾಗತಿಸುತ್ತೇನೆ. ೨೪೮ ಎಕರೆ ಸರ್ಪ್ಲಸ್ ಲ್ಯಾಂಡ್ ಬರಬೇಕು. ಇಲ್ಲಿ ಏನಾಗಿದೆಯೆಂದರೆ ಅದನ್ನು ಅವರು ಕ್ರಯಕ್ಕೆ ಕೊಂಡಿದ್ದಾರೆ. ಸರ್ಪ್ಲಸ್ ಲ್ಯಾಂಡ್ ಎಂದು ಡಿಕ್ಲೇರ್ ಮಾಡಿದಮೇಲೆ ಮಾರುವುದಕ್ಕೆ ಅಧಿಕಾರವಿಲ್ಲ. ೪೮ ಎಕರೆ ಸರ್ಪ್ಲಸ್ ಲ್ಯಾಂಡ್ ಎಂದು ತೋರಿಸಿ ಆಗಿನ ತಹಶೀಲ್ದಾರ್ ರವರು ಅವರ ಕಲ್ಯಾಣಕ್ಕೆ ಕೊಟ್ಟಿದ್ದಾರೆ. ಲ್ಯಾಂಡ್ ಟ್ರಿಬ್ಯುನಲ್ ಮೆಂಬರ್ಸ್ ನಾವೇ ಇದ್ದೇವೆ, ಕಾನೂನು ಪ್ರಕಾರ, ರಿಪೇಂಡ್ ಮಾಡಿದಾಗ, ಫಾರಂ ೧೧ರ ಪ್ರಕಾರ ಸರ್ಪ್ಲಸ್ ಲ್ಯಾಂಡ್ ಹಂಚುವುದು ನಮ್ಮೆದುರಿಗೇ ಬರುತ್ತದೆ. ಅವರು ಆ ರೀತಿ ಹಂಚಿಕೊಂಡರೆ ಸರ್ಕಾರದವರು ನಮ್ಮ ಮೇಲೆ ಕ್ರಮ ತೆಗೆದುಕೊಳ್ಳಬಹುದು ಎಂದೂ ಕ್ರಯ ಮಾಡಿದ್ದಾರೆ. ಇದನ್ನೆಲ್ಲಾ ನೀವು ತಿಳಿದು ಸೂಕ್ತ ಕ್ರಮವನ್ನು ಆದಷ್ಟು ಬೇಗ ತೆಗೆದುಕೊಂಡು, ಯಾರು ಅಲೆದಾಡುತ್ತಿದ್ದಾರೆ, ಸಾಗುವಳಿ ಚೀಟಿ ಇಟ್ಟುಕೊಂಡಿದ್ದಾರೆ, ಆದರೆ ಅವರಿಗೆ ಜಮೀನು ಇಲ್ಲ, ಅವರಿಗೆ ಜಮೀನು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—೧೯೭೬ರಲ್ಲಿ ಡಿಟರ್ಮಿನ್ ಮಾಡತಕ್ಕ ಅಧಿಕಾರ ತಹಶೀಲ್ದಾರರಿಗೆ ಇತ್ತು. ಅದಕ್ಕೋಸ್ಕರ ಆ ತಹಶೀಲ್ದಾರ್ ಮಾಡಿದ್ದಾರೆ, ಲ್ಯಾಂಡ್ ಟ್ರಿಬ್ಯುನಲ್ ಮಾಡಿಲ್ಲ. ಅದಕಾರಣ ೧೯೭೬ರಲ್ಲಿ ಇದನ್ನು ರಿವೈವ್ ಮಾಡತಕ್ಕ ಅಧಿಕಾರ ಲ್ಯಾಂಡ್ ಟ್ರಿಬ್ಯುನಲ್‌ಗೆ ಇರಲಿಲ್ಲ. ಆದ್ದರಿಂದ ಇನ್ನು ಮೇಲೆ ತಿದ್ದುಪಡಿ ತಂದು ಎಲ್ಲೆಲ್ಲಿ ಈ ರೀತಿಯಾಗಿ ಮೋಸವಾಗಿದೆ, ಎಲ್ಲೆಲ್ಲಿ ಈ ರೀತಿಯಾಗಿ ಸರ್ಪ್ಲಸ್ ಲ್ಯಾಂಡನ್ನು ತಪ್ಪಿಸಿದ್ದಾರೆ, ಅದನ್ನು ಸರಿಪಡಿಸುವುದಕ್ಕೆ ಅನುಕೂಲವಾಗಬಹುದು. ೫೨ ಎಕರೆ ವೆಟ್‌ಲ್ಯಾಂಡ್ ಇದೆ, ಸಮಾರು ೧೭೫ ಎಕರೆ ಡ್ರೈಲ್ಯಾಂಡ್ ಇದೆ. ಅನ್ಯಾಯವಾಗಿದೆ ಎಂದು ಕಂಡುಬಂದರೂ ಸರ್ಕಾರದವರು ನೇರವಾಗಿ ಹಸ್ತಕ್ಷೇಪ ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ರಿವ್ಯೂ ಮಾಡಬೇಕು ಎಂದು ನಿಮಗೆ ಕೊಟ್ಟರೆ, ಅದನ್ನು ಸರಿ ಮಾಡಬಹುದು ಎಂಬ ನಂಬಿಕೆ ಇದೆ. ಅದನ್ನು ಮುಂದೆ ಏನು ಮಾಡುತ್ತಾರೋ ನೋಡೋಣ.

PRESENTATION OF REPORT

Fourteenth Report of P. A, C.

SRI S. R. BOMMAI.—Sir, I beg to present the 14th Report of the Public Accounts Committee on Appropriation Accounts/Finance Accounts and Audit Reports for the years 1973-74 (Supplementary) 1975-76 (Supplementary) and 1975-76 to 1978-79 relating to Irrigation Department.

MR. SPEAKER.—Report presented.

PRESENTATION OF PETITION

SMT. ANUSUYA GAJANANA SHARMA.—Sir, I beg to present the following petitions :

(i) Petition signed by villagers of Kattige, Shathoddi, Majare of Yellapura taluka regarding opening of Primary Health Centre at Shathoddi.